# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್ ಎಮ್.ವೈ.ಎಸ್-9126/2017/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು,
ದಿನಾಂಕ: 05/11/2019.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ಚಾಮರಾಜನಗರ "ಡಿ" ವಿಭಾಗದ ಉಪ್ಪಾರ ಬೀದಿ 17ನೇ ವಾರ್ಡಿನಲ್ಲಿರುವ ಅಸೆಸ್ಮೆಂಟ್ ನಂ. 205/19 ರ ಮುನಿಸಿಪಲ್ ನಿವೇಶನದ ವಿಸ್ತೀರ್ಣ 45 X 36 ಅಡಿಗಳ ಸ್ವತ್ತಿನಲ್ಲಿ ಮಾಡಿರುವ ಒತ್ತುವರಿಯನ್ನು ತೆರವುಗೊಳಿಸಿ ಸದರಿ ನಿವೇಶನದಲ್ಲಿ ಉಂಟಾಗಿರುವ ಕೊಳಚೆಯ ಮಾಲಿನ್ಯವನ್ನು ತಡೆಯಲು ನಿಯಮಾನುಸಾರ ಕ್ರಮ ಜರುಗಿಸುವ ಕುರಿತು.

*****

1. ಶ್ರೀ ಕೃಷ್ಣ ಸ್ವಾಮಿ, ಬಿನ್ ಲೇ: ಚಿಕ್ಕಣ್ಣಶೆಟ್ಟಿ, ಮನೆ ನಂ. 305/1, 17ನೇ ವಾರ್ಡ್, ಉಪ್ಪಾರ ಬೀದಿ, ಚಾಮರಾಜನಗರ ಟೌನ್ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು ಈ ದೂರನ್ನು ಸಲ್ಲಿಸಿ, ಶ್ರೀ ಎಂ. ರಾಜಣ್ಣ, ಪೌರಾಯುಕ್ತರು, ಸಿಟಿ ಮುನ್ಸಿಪಲ್ ಕೌನ್ಸಿಲ್, ಚಾಮರಾಜನಗರ ಟೌನ್, ಚಾಮರಾಜನಗರ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ), ಎದುರುದಾರರ ವಿರುದ್ಧ ಕ್ರಮ ಜರುಗಿಸಲು ಕೋರಿರುತ್ತಾರೆ.

ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ದೂರಿನ ಸಂಕ್ಷಿಪ್ತ ಸಾರಾಂಶ:-

"ಚಾಮರಾಜನಗರ "ಡಿ" ವಿಭಾಗದ ಉಪ್ಪಾರ ಬೀದಿ 17ನೇ ವಾರ್ಡಿನಲ್ಲಿ ಅಸೆಸ್‌ಮೆಂಟ್ ಸಂಖ್ಯೆ: 205ರ 45 X 36 ಅಡಿಗಳ ವಿಸ್ತೀರ್ಣದ ಸರ್ಕಾರಿ ಖಾಲಿ ನಿವೇಶನ ಇರುತ್ತದೆ. ಎದುರುದಾರರ ಬೇಜವಾಬ್ದಾರಿ ಆಡಳಿತದಿಂದ ಲಕ್ಷಾಂತರ ರೂಪಾಯಿಗಳ ಸರ್ಕಾರಿ ಆಸ್ತಿ ರಕ್ಷಣೆ ಮಾಡಿಸಿ ಉಳಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳದೆ ನಿರ್ಲಕ್ಷಿಸಿರುತ್ತಾರೆ. ಇದರಿಂದ ಈ ಖಾಲಿ ನಿವೇಶನವನ್ನು ಖಾಸಗಿ ವ್ಯಕ್ತಿಗಳು ಅಕ್ರಮವಾಗಿ ಒತ್ತುವರಿ ಮಾಡಿ ಮನೆಗಳನ್ನು ನಿರ್ಮಿಸಿ ವಾಸದ ಮನೆಯ ಕೊಳಚೆ ನೀರನ್ನು ಹರಿಯಲು ಬಿಟ್ಟಿರುವುದರಿಂದ ಈ ವಠಾರದಲ್ಲಿ ಕಲುಶಿತ ವಾತಾವರಣ ಉಂಟಾಗಿದ್ದು, ಸಾಂಕ್ರಾಮಿಕ ರೋಗಗಳು ಮತ್ತು ಸೊಳ್ಳೆಗಳ ಕಾಟದಿಂದ ತುಂಬಾ ಕಿರುಕುಳವಾಗಿದೆ. ಈ ಸರ್ಕಾರಿ ಆಸ್ತಿಯನ್ನು ಖಾಸಗಿ ವ್ಯಕ್ತಿಗಳಿಂದ ತೆರವುಗೊಳಿಸಿ ಕಲುಶಿತ ವಾತಾವರಣ ಉಂಟಾಗದಂತೆ ಸೂಕ್ತ ಕ್ರಮ ಕೈಗೊಳ್ಳಲು ಅರ್ಜಿ ಕೊಟ್ಟಿದ್ದರೂ ಸರ್ಕಾರಿ ಆಸ್ತಿಯನ್ನು ರಕ್ಷಣೆ ಮಾಡಿಸಲು ವಿಫಲರಾಗಿರುತ್ತಾರೆ. ಆದ್ದರಿಂದ ಸರ್ಕಾರಿ ಆಸ್ತಿಯನ್ನು ರಕ್ಷಣೆ ಮಾಡಿಸಿ ಕಲುಶಿತ ವಾತಾವರಣ ಉಂಟಾಗದಂತೆ ಕ್ರಮ ಜರುಗಿಸಲು ಆದೇಶ ನೀಡುವಂತೆ" ಕೋರಿರುತ್ತಾರೆ.

ದೂರಿನೊಂದಿಗೆ ಆಸ್ತಿ ತೆರಿಗೆ ರಿಜಿಸ್ಟರ್ ಪ್ರತಿ ಸಲ್ಲಿಸಿದ್ದು ಸದರಿ ದಾಖಲೆಯಲ್ಲಿ ಮುನ್ಸಿಪಲ್ ನಿವೇಶನ ಎಂದು ನಮೂದಿಸಿರುವುದು ಕಂಡುಬಂದಿರುತ್ತದೆ.

3. ಎದುರುದಾರರ ಆಕ್ಷೇಪಣೆ:-

"ಚಾಮರಾಜನಗರ ನಗರಸಭೆ ವ್ಯಾಪ್ತಿಯ ಅ.ನಂ.205, ಆಸ್ತಿಯು ನಗರಸಭೆಯ ಆಸ್ತಿಯಾಗಿದ್ದು, ಸದರಿ ಆಸ್ತಿಯಲ್ಲಿ ಅಕ್ರಮವಾಗಿ ಒತ್ತುವರಿ ಮಾಡಿ, ಮನೆಯನ್ನು ಕಟ್ಟಿಕೊಂಡು ವಾಸ ಮಾಡುತ್ತಿರುವ ರಂಗಸ್ವಾಮಿ ಬಿನ್ ಲೇಟ್ ನಂಜಶೆಟ್ಟಿ ರವರನ್ನು ತೆರವುಗೊಳಿಸಲು ನೀಡಿರುವ ಮನವಿಯನ್ನು ಪರಿಶೀಲಿಸಲಾಗಿ, ಸದರಿ ಮೇಲ್ಕಂಡ ನಿವೇಶನದಲ್ಲಿ ರಂಗಸ್ವಾಮಿ ಬಿನ್ ಲೇಟ್ ನಂಜಶೆಟ್ಟಿ ರವರು ಮುಟ್ಟಾಳೆಷೆಡ್ಡು ನಿರ್ಮಿಸಿಕೊಂಡು ವಾಸ ಮಾಡುತ್ತಿರುವುದು ಕಂಡು ಬಂದಿದ್ದು, ಅದರಂತೆ, ಸದರಿ ನಿವೇಶನಕ್ಕೆ ಸಂಬಂಧಪಟ್ಟ ಮೂಲ ದಾಖಲಾತಿಗಳನ್ನು ಹಾಜರುಪಡಿಸುವಂತೆ ದಿ: 01/03/2017

ಹಾಗೂ ದಿ: 11/05/2017 ರಂದು ತಿಳುವಳಿಕೆ ಪತ್ರ ನೀಡಲಾಗಿದ್ದು, ಇದುವರೆಗೂ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ, ಸದರಿಯವರಿಗೆ ಅಂತಿಮ ತಿಳುವಳಿಕೆ ಪತ್ರ ನೀಡಿ, ಯಾವುದೇ ದಾಖಲೆಗಳನ್ನು ಹಾಜರುಪಡಿಸದೇ ಇದ್ದಲ್ಲಿ ಸದರಿ ನಿವೇಶನವನ್ನು ತೆರವುಗೊಳಿಸಲು ಕ್ರಮ ವಹಿಸಲಾಗುವುದು'' ಎಂದು ನಮೂದಿಸಿರುತ್ತಾರೆ.

4. ತನಿಖಾ ಅವಧಿಯಲ್ಲಿ ಸಂಗ್ರಹಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿರುತ್ತದೆ.

5. ಚಾಮರಾಜನಗರದ ''ಡಿ'' ವಿಭಾಗದ ಉಪ್ಪಾರ ಬೀದಿ 17ನೇ ವಾರ್ಡಿನಲ್ಲಿ ಅಸೆಸ್ಮೆಂಟ್ ಸಂಖ್ಯೆ: 205/190ರ ನಿವೇಶನದ ವಿಸ್ತೀರ್ಣ 45 X 36 ಅಡಿಗಳಿದ್ದು 2002–03ನೇ ಸಾಲಿನ ಆಸ್ತಿ ತೆರಿಗೆ ರಿಜಿಸ್ಟರ್ ಪ್ರತಿಯಲ್ಲಿ ಮುನ್ಸಿಪಲ್ ನಿವೇಶನ ಎಂದು ನಮೂದಿರುತ್ತದೆ.

ಸದರಿ ಸರ್ಕಾರಿ ನಿವೇಶನವನ್ನು ಅಕ್ರಮವಾಗಿ ಒತ್ತುವರಿ ಮಾಡಿದ್ದು ಕ್ರಮ ಜರುಗಿಸಲು ಎದುರುದಾರರಿಗೆ ದೂರು ನೀಡಿದ್ದರೂ ಕ್ರಮ ಜರುಗಿಸಿಲ್ಲವೆಂದು ಸರ್ಕಾರಿ ಆಸ್ತಿ ರಕ್ಷಿಸಬೇಕೆಂದು ಕೊಳಚೆ ನೀರಿನಿಂದ ಉಂಟಾದ ಮಾಲಿನ್ಯವನ್ನು ತಡೆಯಬೇಕೆಂದು ದೂರು ಸಲ್ಲಿಸಿರುತ್ತಾರೆ.

ಪಿರ್ಯಾದುದಾರರು ದೂರು ಸಲ್ಲಿಸಿದ ನಂತರ ರಾಜಸ್ವ ನಿರೀಕ್ಷಕರು ಸ್ಥಳ ಪರಿಶೀಲಿಸಿದ್ದು ಶ್ರೀರಂಗಸ್ವಾಮಿ ಎನ್ನುವವರು ಸದರಿ ನಿವೇಶನದಲ್ಲಿ ಅಕ್ರಮವಾಗಿ ಗುಡಿಸಲು ಕಟ್ಟಿಕೊಂಡು ವಾಸಿಸುತ್ತಿದ್ದ ಬಗ್ಗೆ ವರದಿ ಸಲ್ಲಿಸಿದ ಮೇರೆಗೆ ಗುಡಿಸಲು ತೆರವುಗೊಳಿಸಲು ಸೂಚಿಸಿ ದಿನಾಂಕ: 01/03/2017 ರಂದು ತಿಳುವಳಿಕೆ ಪತ್ರವನ್ನು ಶ್ರೀ ರಂಗಸ್ವಾಮಿ ರವರಿಗೆ ಎದುರುದಾರರು ನೀಡಿರುತ್ತಾರೆ.

ಶ್ರೀ ರಂಗಸ್ವಾಮಿ ಇವರು ಅಕ್ರಮವಾಗಿ ಹಾಕಿಕೊಂಡಿದ್ದ ಗುಡಿಸಲನ್ನು ತೆರವುಗೊಳಿಸದ ಕಾರಣ ಪಂಚಾಯತಿ ವತಿಯಿಂದ ಮನ: ದಿನಾಂಕ: 11/05/2017 ರಂದು 2ನೇ ತಿಳುವಳಿಕೆ ಪತ್ರ ನೀಡಿರುವುದಾಗಿ ದಾಖಲೆ ಸಲ್ಲಿಸಿರುತ್ತಾರೆ.

ಎದುರುದಾರರು ದಿನಾಂಕ: 22/06/2016 ರಿಂದ ಕರ್ತವ್ಯ ನಿರ್ವಹಿಸುತ್ತಿದ್ದು ಸರ್ಕಾರಿ ಆಸ್ತಿಯನ್ನು ಸಂರಕ್ಷಿಸದೆ ಸರ್ಕಾರಿ ಸ್ವತ್ತಿನಲ್ಲಿ ಉಂಟಾದ ಕೊಳಚೆಯ ಮಾಲಿನ್ಯವನ್ನು ತಡೆಯಲು ಕ್ರಮ ಜರುಗಿಸದೆ ಇರುವುದು ಕಂಡುಬಂದಿರುತ್ತದೆ. ಮುನ್ಸಿಪಲ್ ನಿವೇಶನ ಒತ್ತುವರಿ ಮಾಡಿದ್ದನ್ನು ತೆರವುಗೊಳಿಸಲು ಮುನ್ಸಿಪಲ್ ಆಸ್ತಿಯನ್ನು ರಕ್ಷಿಸಲು ಹಾಗೂ ಸರ್ಕಾರಿ ಆಸ್ತಿಯಲ್ಲಿ ಕೊಳಚೆ ನಿರ್ಮಾಣವಾಗಿದ್ದು ಮಾಲಿನ್ಯವನ್ನು ತಡೆಯಲು ಎದುರುದಾರರು ನಗರಸಭೆ ವತಿಯಿಂದ ಅಗತ್ಯ ಕ್ರಮ ಜರುಗಿಸಬೇಕಿದ್ದು ಜರುಗಿಸದೆ ಇರುವುದು ತನಿಖೆಯಲ್ಲಿ ಕಂಡುಬಂದಿರುತ್ತದೆ.

6. Karnataka Municipalities Act 1964 ಕಲಂ 81 ರ ರೀತ್ಯಾ ಮುನಿಸಿಪಲ್ ಸ್ವತ್ತುಗಳನ್ನು ಸಂರಕ್ಷಿಸುವ ಹೊಣೆಗಾರಿಕೆ ಇದ್ದರೂ ಅಗತ್ಯ ಕ್ರಮ ಜರುಗಿಸದೆ ಇರುವುದು ಕಂಡುಬಂದಿರುತ್ತದೆ.

7. ಚಾಮರಾಜನಗರ "ಡಿ" ವಿಭಾಗದ ಉಪ್ಪಾರ ಬೀದಿ 17ನೇ ವಾರ್ಡಿನಲ್ಲಿರುವ ಅಸೆಸ್ಮೆಂಟ್ ನಂ. 205/19 ರ ಮುನಿಸಿಪಲ್ ನಿವೇಶನದ ವಿಸ್ತೀರ್ಣ 45 X 36 ಅಡಿಗಳ ಸ್ವತ್ತಿನಲ್ಲಿ ಮಾಡಿರುವ ಒತ್ತುವರಿಯನ್ನು ತೆರವುಗೊಳಿಸಿ ಸದರಿ ನಿವೇಶನದಲ್ಲಿ ಉಂಟಾಗಿರುವ ಕೊಳಚೆಯ ಮಾಲಿನ್ಯವನ್ನು ತಡೆಯಲು ನಿಯಮಾನುಸಾರ ಅಗತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವಂತೆ ನಿರ್ದೇಶಿಸಿ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರೀತಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

8. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

[ನ್ಯಾಯಮೂರ್ತಿ ಎನ್. ಆನಂದ]
5/1
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**